# <u>ಕರ್ನಾಟಕ ವಿಧಾನ ಪರಿಷತ್ತು</u>

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** : **ಶ್ರೀ ಎಸ್ ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **218**

**ಉತ್ತರಿಸಬೇಕಾದ ದಿನಾಂಕ** : **12-08-2025**

**ಉತ್ತರಿಸಬೇಕಾದ ಸಚಿವರು** : **ಮಾನ್ಯ ಮುಖ್ಯಮಂತ್ರಿ**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯಿಂದ ರೈತರಿಗಾಗಿ ಇರುವ ವಿವಿಧ ಸಾಲದ ಯೋಜನೆಗಳು ಯಾವುವು; | ಸಹಕಾರ ಇಲಾಖೆ ವ್ಯಾಪ್ತಿಗೆ ಬರುವ ಡಿ.ಸಿ.ಸಿ ಬ್ಯಾಂಕ್, ಪ್ಯಾಕ್ಸ್ ಮತ್ತು ಪಿಕಾರ್ಡ್ ಬ್ಯಾಂಕುಗಳಿಂದ ಕೃಷಿ ಸಾಲ, ಪಶು ಸಂಗೋಪನೆ ಸಾಲ, ಮೀನುಗಾರಿಕೆ ಅಭಿವೃದ್ಧಿ ಹಾಗೂ ರೈತ ಸದಸ್ಯರಿಗೆ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡಲಾಗುತ್ತಿದೆ.<br><br>ಈ ಪೈಕಿ ಶೂನ್ಯ ಬಡ್ಡಿದರದಲ್ಲಿ ರೂ.5.00 ಲಕ್ಷದವರೆಗೆ ಕೃಷಿ ಅಲ್ಪಾವಧಿ ಮತ್ತು ಶೇ.3 ರ ಬಡ್ಡಿದರದಲ್ಲಿ ರೂ.15.00 ಲಕ್ಷಗಳವರೆಗೆ ಕೃಷಿ ಅಭಿವೃದ್ಧಿ, ನೀರಾವರಿ ಮತ್ತು ಕೃಷಿಗೆ ಸಂಬಂಧಿಸಿದ ಯಂತ್ರೋಪಕರಣ ಖರೀದಿಗೆ ಮಧ್ಯಮಾವಧಿ ಕೃಷಿ ಸಾಲ ಮತ್ತು ಇತರೇ ಕೃಷಿಯೇತರ ಸಾಲಗಳನ್ನು ನೀಡಲಾಗುತ್ತಿದೆ. |
| ಆ) | ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಹಕಾರ ಇಲಾಖೆಯಡಿಯಲ್ಲಿ ಬರುವ ಬ್ಯಾಂಕುಗಳಲ್ಲಿ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಕಳೆದ 3 ವರ್ಷದಿಂದ ಇಲ್ಲಿಯವರೆಗೆ ಸಾಲದ ಯೋಜನೆಯಡಿಯಲ್ಲಿ ರೈತರಿಗೆ ಎಷ್ಟು ಮೊತ್ತದ ಸಾಲವನ್ನು ನೀಡಲಾಗಿದೆ; ಯಾವ ಯಾವ ಯೋಜನೆಯಡಿಯಲ್ಲಿ ನೀಡಲಾಗಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಹಕಾರ ಇಲಾಖೆಗಳಲ್ಲಿ ಬರುವ ಬ್ಯಾಂಕುಗಳಲ್ಲಿ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಕಳೆದ 3 ವರ್ಷದಿಂದ ಇಲ್ಲಿಯವರೆಗೆ ಸಾಲದ ಯೋಜನೆಯಡಿಯಲ್ಲಿ ರೈತರಿಗೆ ನೀಡಲಾದ ಸಾಲದ ವಿವರವನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ. |
| ಇ) | ಶೃಂಗೇರಿ ತಾಲ್ಲೂಕಿನ ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ ಕಳೆದ 3 ವರ್ಷದಿಂದ ಇಲ್ಲಿಯವರೆಗೆ ನೀಡಿರುವ ಸಾಲದ ಯೋಜನೆಗಳು ಯಾವುವು; (ಫಲಾನುಭವಿವಾರು ಮಾಹಿತಿ ನೀಡುವುದು) | ಶೃಂಗೇರಿ ತಾಲ್ಲೂಕಿನ ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ ಕಳೆದ 3 ವರ್ಷದಿಂದ ಇಲ್ಲಿಯವರೆಗೆ ನೀಡಿರುವ ಸಾಲದ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

| | | |
|---|---|---|
| ಈ) | ಕೊಪ್ಪ, ಶೃಂಗೇರಿ ಹಾಗೂ ಎನ್.ಆರ್ ಪುರ ತಾಲ್ಲೂಕಿನ ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; ಸದರಿ ಸಂಸ್ಥೆಗಳಲ್ಲಿ ಅಧಿಕಾರಿಗಳ ಸಂಖ್ಯೆ ಕಡಿಮೆ ಇರುವುದರಿಂದ ಸಾರ್ವಜನಿಕರಿಗೆ ಹಾಗೂ ರೈತರಿಗೆ ಕೆಲಸಕಾರ್ಯಗಳು ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸದರಿ ನ್ಯೂನತೆಯನ್ನು ಸರಿಪಡಿಸಲಾಗುವುದು. ಖಾಯಂ ಹಾಗೂ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು? (ಅಧಿಕಾರಿವಾರು, ಪದನಾಮವಾರು ಸಂಪೂರ್ಣವಾದ ಮಾಹಿತಿ ನೀಡುವುದು) | ಕೊಪ್ಪ, ಶೃಂಗೇರಿ ಹಾಗೂ ಎನ್.ಆರ್ ಪುರ ತಾಲ್ಲೂಕಿನ ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ಖಾಯಂ ನೌಕರರು-20 ಮತ್ತು ಹೊರಗುತ್ತಿಗೆ ನೌಕರರು-14 ಜನ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿ ವಿವರವನ್ನು **ಅನುಬಂಧ-3ರಲ್ಲಿ** ನೀಡಲಾಗಿದೆ.<br><br>ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ವಿವಿಧ ಸ್ತರದ 85 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಈಗಾಗಲೇ ಲಿಖಿತ ಪರೀಕ್ಷೆ ಮುಕ್ತಾಯವಾಗಿದ್ದು, ಸದರಿ ಪ್ರಕ್ರಿಯೆ ಮುಕ್ತಾಯಗೊಂಡಲ್ಲಿ ಸಿಬ್ಬಂದಿ ಕೊರತೆ ನಿವಾರಣೆಯಾಗಲಿದೆ. |

**ಕಡತ ಸಂಖ್ಯೆ: ಸಿಒ 209 ಸಿಎಲ್‌ಎಸ್ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಎಸ್. ಎಲ್ ಭೋಜೇಗೌಡ(ಶಿಕ್ಷಕರ ಕ್ಷೇತ್ರ) ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 218(156) ಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಹಕಾರ ಇಲಾಖೆಗಳಲ್ಲಿ ಬರುವ ಬ್ಯಾಂಕುಗಳಲ್ಲಿ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಅನುಬಂಧ- 1

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆಗಳ ವಿವರ | 2022-23 | | 2023-24 | | 2024-25 | |
|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಗೃಹ ಸಾಲ | 144 | 2020.65 | 184 | 2828.95 | 151 | 2893.35 |
| 2 | ಚಿನ್ನಾಭರಣ ಸಾಲ | 8277 | 7704.32 | 8706 | 9059.62 | 11710 | 17088.84 |
| 3 | ಆಸ್ತಿ ಮೇಲಿನ ಸಾಲ | 141 | 1883.05 | 153 | 2522.23 | 234 | 4484.94 |
| 4 | ಸಾಮಾನ್ಯ ಕೃಷಿ ಅಭಿವೃದ್ಧಿ ಸಾಲ | 128 | 1006.33 | 43 | 427.92 | 16 | 196.47 |
| 5 | ವ್ಯಾಪಾರಸ್ಥರ ಸಾಲ | 297 | 264.74 | 280 | 245.43 | 150 | 138.47 |
| 6 | ಸ್ವಸಹಾಯ ಸಂಘಗಳ ಸಾಲ | 78 | 213.87 | 51 | 139.75 | 31 | 89.95 |
| 7 | ವಾಹನ ಸಾಲ | 977 | 6671.86 | 819 | 5945.48 | 1077 | 8542.98 |
| 8 | ಠೇವಣಿ ಮೇಲಿನ ಸಾಲ | 1350 | 4811.28 | 1552 | 6328.12 | 1588 | 6225.28 |
| 9 | ಕೃಷಿ ಅಭಿವೃದ್ಧಿ ಸಾಲ | 560 | 3549.04 | 0 | 0 | 0 | 0 |
| 10 | ಕಟ್ಟಡ ಮತ್ತು ನಿವೇಶನ ಖರೀದಿ ಸಾಲ | 1 | 35.38 | 3 | 46.2 | 1 | 29.4 |
| 11 | ಕೃಷಿ ಭೂಮಿ ಖರೀದಿ ಸಾಲ | 2 | 82 | 1 | 12.82 | 1 | 14.57 |
| 12 | ಸಾಮಾನ್ಯ ಮೀರಳತಿ ಸಾಲ | 254 | 2046.13 | 86 | 1005 | 81 | 2152.77 |
| 13 | ಸ್ಥಿರಾಸ್ತಿ ಮೇಲಿನ ಓವರ್ ಡ್ರಾಫ್ಟ್ | 2 | 23 | 9 | 90.5 | 14 | 202.8 |
| 14 | ಠೇವಣಿ ಮೇಲಿನ ಮೀರಳತಿ ಸಾಲ | 95 | 1616.13 | 15 | 380 | 9 | 207.5 |
| 15 | ನಿವೇಶನ ಖರೀದಿ ಸಾಲ | 0 | 0 | 3 | 35.97 | 25 | 464.6 |
| 16 | ಠೇವಣಿ ಮೇಲಿನ ಓವರ್ ಡ್ರಾಫ್ಟ್ | 0 | 0 | 51 | 1061.79 | 57 | 1727.03 |
| 17 | ಶಿಕ್ಷಣ ಸಾಲ | 0 | 0 | | 0 | 1 | 2.5 |
| 18 | ಕೃಷಿ ಮಾಧ್ಯಮಾವಧಿ ಸಾಲ | 169 | 1321.16 | 190 | 1337.6 | 232 | 1590.21 |
| 19 | ಬೆಳೆ ಸಾಲ | 57551 | 88188.09 | 56714 | 86905.12 | 55743 | 85276.6 |
| 20 | ಹೈನುಗಾರಿಕೆ | 35 | 333.73 | 604 | 329.88 | 1158 | 516.977 |
| 21 | ಮೀನುಗಾರಿಕೆ | 6 | 11.55 | 9 | 24.22 | 14 | 30.07 |
| | ಒಟ್ಟು | 70067 | 121782.31 | 69473 | 119043.63 | 72293 | 131875.30 |

ಸಹಕಾರ ಸಂಘಗಳ [illegible] ನಿಬಂಧಕರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಎಸ್. ಎಲ್ ಭೋಜೇಗೌಡ(ಶಿಕ್ಷಕರ ಕ್ಷೇತ್ರ) ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 218(156) ಕ್ಕೆ ಸಂಬಂಧಿಸಿದಂತೆ ಶೃಂಗೇರಿ ತಾಲ್ಲೂಕಿನ ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ

ಅನುಬಂಧ-2

(ರೂ. ಲಕ್ಷಗಳಲ್ಲಿ)

| ಕ್ರಸಂ | ಯೋಜನೆಗಳ ವಿವರ | 2022-23 | | 2023-24 | | 2024-25 | |
|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಗೃಹ ಸಾಲ | 25 | 142.5 | 25 | 123.04 | 8 | 44.95 |
| 2 | ಚಿನ್ನಾಭರಣ ಸಾಲ | 56 | 153.72 | 35 | 204.99 | 25 | 156.45 |
| 3 | ಆಸ್ತಿ ಮೇಲಿನ ಸಾಲ | 32 | 205.5 | 25 | 75 | 15 | 143 |
| 4 | ಸಾಮಾನ್ಯ ಕೃಷಿ ಅಭಿವೃದ್ಧಿ ಸಾಲ | 23 | 90.61 | 23 | 25.6 | 12 | 16.05 |
| 5 | ವ್ಯಾಪಾರಸ್ಥರ ಸಾಲ | 22 | 17 | 22 | 30.65 | 2 | 1.5 |
| 6 | ಸ್ವಸಹಾಯ ಸಂಘಗಳ ಸಾಲ | 0 | 0 | 1 | 3 | 4 | 2.5 |
| 7 | ವಾಹನ ಸಾಲ | 35 | 281.1 | 29 | 204.41 | 30 | 200.14 |
| 8 | ಠೇವಣಿ ಮೇಲಿನ ಸಾಲ | 85 | 623.06 | 50 | 581.38 | 37 | 121.21 |
| 9 | ಕೃಷಿ ಅಭಿವೃದ್ಧಿ ಸಾಲ | 28 | 27.78 | 0 | 0 | 0 | 0 |
| 10 | ಕಟ್ಟಡ ಮತ್ತು ನಿವೇಶನ ಖರೀದ ಸಾಲ | 0 | 0 | 0 | 19 | 0 | 0 |
| 11 | ಕೃಷಿ ಭೂಮಿ ಖರಿಧಿ ಸಾಲ | 11 | 82 | 11 | 0 | 0 | 0 |
| 12 | ಸಾಮಾನ್ಯ ಮೀರಳಕೆ ಸಾಲ | 30 | 181.91 | 21 | 60 | 15 | 55 |
| 13 | ನಿವೇಶನ ಖರೀದಿ ಸಾಲ | 0 | 0 | 0 | 0 | 15 | 84 |
| 14 | ಠೇವಣಿ ಮೇಲಿನ ಓವರ್ ಡ್ರಾಫ್ಟ್ | 0 | 0 | 36 | 364.55 | 35 | 349.75 |
| 15 | ಕೃಷಿ ಮಧ್ಯಮಾವಧಿ ಸಾಲ | 4 | 22.39 | 12 | 77.64 | 15 | 71.56 |
| 16 | ಬೆಳೆ ಸಾಲ | 2392 | 6121.4 | 3054 | 6384.98 | 2316 | 6335.7 |
| | ಒಟ್ಟು | 2743 | 7948.97 | 3343 | 8154.24 | 2529 | 7581.81 |

ಸಹಕಾರ ಸಂಘಗಳ ಉಪ ನಿಬಂಧಕರು

ಸಹಿ 08/8/25

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಎಸ್. ಎಲ್ ಭೋಜೇಗೌಡ(ಶಿಕ್ಷಕರ ಕ್ಷೇತ್ರ) ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 218(156) ಕ್ಕೆ ಸಂಬಂಧಿಸಿದಂತೆ ಅನುಬಂಧ-3

| ಕ್ರಸಂ | ಶಾಖೆ ಹೆಸರು | ಖಾಯಂ ನೌಕರರ ವಿವರ | ಖಾಯಂ ನೌಕರರ ಸಂಖ್ಯೆ | ಹೊರಗುತ್ತಿಗೆ ನೌಕರರ ವಿವರ | ಹೊರಗುತ್ತಿಗೆ ನೌಕರರ ಸಂಖ್ಯೆ |
|---|---|---|---|---|---|
| 1 | ಕೊಪ್ಪ ಶಾಖೆ | ಶಾಖಾ ವ್ಯವಸ್ಥಾಪಕರು -3<br>ಮೇಲ್ವಿಚಾರಕರು - 1<br>ಸಹಾಯಕ ವ್ಯವಸ್ಥಾಪಕರು -4<br>ಪ್ರಥಮ ದರ್ಜೆ ಸಹಾಯಕರು -1<br>ಸೇವಕರು - 1 | 10 | ಗುಮಾಸ್ತರು - 7 | 7 |
| 2 | ಶೃಂಗೇರಿ ಶಾಖೆ | ಶಾಖಾ ವ್ಯವಸ್ಥಾಪಕರು -1<br>ಮೇಲ್ವಿಚಾರಕರು - 1<br>ಸಹಾಯಕ ವ್ಯವಸ್ಥಾಪಕರು - 2 | 4 | ಗುಮಾಸ್ತರು - 1 | 1 |
| 3 | ಎನ್.ಆರ್.ಪುರ ಶಾಖೆ | ಶಾಖಾ ವ್ಯವಸ್ಥಾಪಕರು -2<br>ಸಹಾಯಕ ವ್ಯವಸ್ಥಾಪಕರು - 3<br>ಪ್ರಥಮ ದರ್ಜೆ ಸಹಾಯಕರು - 1 | 6 | ಗುಮಾಸ್ತರು - 6 | 6 |
| ಒಟ್ಟು | | | 20 | | 14 |

ಸಹಕಾರ ಸಂಘಗಳ ಉಪ ನಿಬಂಧಕರು
ಪತ್ತು
08/8/25